

## ಕಳೆದ ಸಂಚಿಕೆಯಲ್ಲಿ

ಸುಗಂಧಾ ಮನೆ ಬದಲಾಯಿಸಿದ ಮೇಲೆ ಅಮ್ಮ ಬರುತ್ತಾರೆ. ಮನೆ ಶಿಫ್ಟ್ ಮಾಡುವಾಗ ಕರೆಯದೇ ಇರುವುದಕ್ಕೆ ಹುಸಿಮುನಿಸು ತೋರಿಸುತ್ತಾರೆ. ರಿತಿಕ್ ಸಹಾಯ ಮಾಡಿದ ವಿಷಯ ತಿಳಿಸಿದಾಗ ‘ಈ ರಿತಿಕ್ ಯಾರು?’ ಎಂದು ಕೇಳಿದರು. ರಿತಿಕ್ ಅನ್ನು ತಾಯಿಗೆ ಪರಿಚಯ ಮಾಡಿಕೊಟ್ಟಳು ಸುಗಂಧಾ. ಹೊರಡುವ ಮುನ್ನ ರಿತಿಕ್ ಅನ್ನು ಮದುವೆಯಾಗುತ್ತೀಯಾ ಎಂದು ತಾಯಿ ಕೇಳುತ್ತಾರೆ. ಆಗ ಈತ ನನ್ನ ಸ್ನೇಹಿತ ಅಷ್ಟೇ ಎನ್ನುತ್ತಾಳೆ. ಹಳೆಯ ಮನೆಯಂತೆ ಇಲ್ಲೂ ನೆರೆಮನೆಯವರು ರಿತಿಕ್ ಬಗ್ಗೆ ವಿಚಾರಿಸಲಾರಂಭಿಸಿದರು. ಆತ ನನ್ನ ದತ್ತಕ ಸಹೋದರ ಎಂಬ ಉತ್ತರ ಸುಗಂಧಾಳದ್ದು. ಆದರೂ ಎಲ್ಲರೂ ಆಕ್ಷೇಪಿಸುವ ದನಿಯಲ್ಲಿ ಮಾತಾಡುತ್ತಾರೆ. ಈ ಮನೆಯಲ್ಲೂ ಹಳೆಯ ಕಥೆ ಮರುಕಳಿಸಿದ್ದು ಸುಗಂಧಾ ಚಿಂತೆಗೆ ಕಾರಣವಾಗುತ್ತದೆ. ರಿತಿಕ್–ಸುಗಂಧಾ ಮದುವೆ, ಮದುವೆಯಾಚೆಗಿನ ಸಂಬಂಧದ ಬಗ್ಗೆ ಚರ್ಚಿಸುತ್ತಾರೆ. ಮದುವೆಯಾಗದೆಯೇ ರಿತಿಕ್ ಜೊತೆ ಬಾಳಬಯಸುವ ಇಂಗಿತ ವ್ಯಕ್ತಪಡಿಸಿ ಒಂದು ರಾತ್ರಿ ಒಟ್ಟಿಗೆ ಕಳೆಯುತ್ತಾರೆ.

ಈ ಚಾನ್ಸ್ ಎಲ್ಲಿದೆ?’ ಕೀರ್ತಿ ನಿಟ್ಟುಸಿರು ಬಿಟ್ಟಳು.

‘ನಿನ್ನೆ ರಿತಿಕ್‌ನ ತಂದೆ ಬಂದಿದ್ದರು.’

‘ಓಹ್! ಆಮೇಲೆ ಏನಾಯ್ತು? ಅವರು ಏನು ಹೇಳಿದ್ರು?’ ಕೀರ್ತಿಯ ಉತ್ಸುಕತೆ ಅವಳ ಧ್ವನಿಯಲ್ಲಿ ಕಾಣ ಬರುತ್ತಿತ್ತು.

‘ಆಗೋದೇನು, ಅವರು ಮದುವೆ ಮಾಡಿಕೊಳ್ಳಲು ಆಗ್ರಹಿಸಿದರು. ಸಾಮಾಜಿಕ ಪ್ರತಿಷ್ಠೆಯ ಹೆಸರಿನಲ್ಲಿ ನಮ್ಮ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದರು. ಇವತ್ತು ಬೆಳಿಗ್ಗೆ ರಿತಿಕ್ ಅವರನ್ನು ರೈಲ್ವೆ ಸ್ಟೇಷನ್‌ಗೆ ಬಿಟ್ಟು ಬರಲು ಹೋಗಿದ್ದ’. ಒಂದು ವೇಳೆ ನಾನು ಈ ಬಗ್ಗೆ ಯಾರೊಂದಿಗಾದರು ಚರ್ಚಿಸದಿದ್ದರೆ, ನನ್ನ ತಲೆ ಸಿಡಿದು ಹೋಗುತ್ತದೆ ಎಂದು ಅನ್ನಿಸಿತ್ತು. ಈ ಬಗ್ಗೆ ಮಿಸೆಸ್ ಕಶ್ಯಪ್‌ರಲ್ಲಿ ಮಾತನಾಡುವುದು ವ್ಯರ್ಥವಾಗಿತ್ತು. ಕೀರ್ತಿಯೊಂದಿಗೆ ಮಾತ್ರ ನಾನು ನನ್ನ ಕಷ್ಟಸುಖವನ್ನು ಹಂಚಿಕೊಳ್ಳುತ್ತಿದ್ದೆ. ಆದರೆ ಕೀರ್ತಿಯಿಂದ ಗೌಪ್ಯತೆಯನ್ನು ರಕ್ಷಿಸುವುದನ್ನು ಮಾತ್ರ ನಿರೀಕ್ಷಿಸುವುದು ವ್ಯರ್ಥವಾಗಿತ್ತು.

‘ರಿತಿಕ್ ಏನು ಪ್ರತಿಕ್ರಿಯೆ ವ್ಯಕ್ತಪಡಿಸಿದ?’ ಕೀರ್ತಿ ಕೇಳಿದಳು.

‘ಅವನು ತಂದೆಯವರ ಪ್ರಸ್ತಾವವನ್ನು ತಿರಸ್ಕರಿಸಿದ’.

‘ವೆರಿಗುಡ್! ಅವನು ತುಂಬಾ ಧೈರ್ಯವಂತ. ಐ ಲೈಕ್ ಹಿಮ್. ಲುಕ್, ಯೂ ಆರ್ ಸೋ ಲಕ್ಕಿ, ನಿನಗೆ ರಿತಿಕ್‌ನಂಥ ವ್ಯಕ್ತಿ ಸಿಕ್ಕಿದ್ದಾನೆ’. ಕೀರ್ತಿ ಆಗ ಮನಸಾರೆ ರಿತಿಕ್‌ನನ್ನು ಪ್ರಶಂಸಿಸುತ್ತಿದ್ದಳು. ನನಗೆ ರಿತಿಕ್‌ನೊಂದಿಗಿನ ನನ್ನ ಸಂಬಂಧದ ಬಗ್ಗೆ ಗರ್ವವೆನಿಸಿತು. ನನ್ನ ಮನಸ್ಸು ಹಗುರವಾಯಿತು. ನಾನು ಊಟದ ಬಿಡುವಿನಲ್ಲಿ ಎಲ್ಲರೊಂದಿಗೆ ಊಟ ಮಾಡಿದೆ. ಈ ನಡುವೆ ರಿತಿಕ್‌ಗೆ ಫೋನ್ ಮಾಡಿ, ಅವನು ಊಟ ಮಾಡಿರುವನೋ, ಇಲ್ಲವೋ ಎಂಬ ಬಗ್ಗೆ ಕೇಳಿದ್ದೆ. ತಾನು ರೆಸ್ಟೋರೆಂಟಿಗೆ ಹೋಗಿ ತಿಂದು ಬಂದಿದ್ದೇನೆ ಎಂದು ರಿತಿಕ್ ಹೇಳಿದ. ನಾನು ಶಾಂತಚಿತ್ತದಿಂದ ನನ್ನ ಕೆಲಸದಲ್ಲಿ ತೊಡಗಿದ್ದೆ. ಮಧ್ಯಾಹ್ನದ ನಾಲ್ಕೂವರೆ ಗಂಟೆಗೆ ಜವಾನ ಬಂದು ನನಗೆ ಫೋನ್ ಇರುವುದಾಗಿ ಹೇಳಿದ. ನಾನು ಅಕೌಂಟೆಂಟರ ಚೇಂಬರ್‌ಗೆ ಹೋದೆ. ಅಲ್ಲಿಯ ಫೋನನ್ನೇ ನಾವೆಲ್ಲರೂ ಉಪಯೋಗಿಸುತ್ತಿದ್ದೆವು.

ಫೋನ್ ಯಾರದ್ದಿರಬಹುದು? ನಾನು ಯೋಚಿಸಿದೆ. ನನ್ನ ಪರಿಚಿತರ ಬಳಿ ನನ್ನ ಮೊಬೈಲ್ ನಂಬರ್ ಇತ್ತು. ಬೇರೊಂದು ಕಚೇರಿಯಿಂದ ಅಫಿಶಿಯಲ್ ಫೋನ್‌ಕಾಲ್ ಬಂದಿರಬಹುದು ಎಂದು ಯೋಚಿಸಿದೆ.

‘ಹಲೋ! ನಾನು ಸುಗಂಧಾ ಮಾತಾಡ್ತಿದ್ದೇನೆ. ನೀವ್ಯಾರು?’ ಕೇಳಿದೆ. ಆಗ ಅಕೌಂಟೆಂಟ್ ಸಾಹೇಬರು ಅಲ್ಲಿರಲಿಲ್ಲ.

‘ನಾನು ರಿತಿಕ್‌ನ ಅಮ್ಮ ಮಾತಾಡ್ತಿದ್ದೇನೆ’, ಅವರ ಧ್ವನಿಯಲ್ಲಿ ಶುಷ್ಕತೆಯಿದ್ದು, ನನ್ನ ಶರೀರ ಕಂಪಿಸಿತು.

‘ನಮಸ್ತೆ ಆಂಟಿ’ ನಾನು ಕೂಡಲೇ ಹೇಳಿದೆ.

‘ಹಾಳು ಮಾಡಲು ನಿನಗೆ ನನ್ನ ಮಗನೇ ಸಿಕ್ಕನೇ?’ ಅವರು ಯಾವ ಭೂಮಿಕೆಯಿಲ್ಲದೆ ನನ್ನ ಮೇಲೆ ಆಕ್ರಮಣವೆಸಗಿದರು. ‘ಹಾ...ಗಿತ್ತಿ, ನೀನು ವೇಶ್ಯೆಯಾಗಬೇಕೆಂದಿದ್ದರೆ, ಸಾವಿರ ಜನ ನಿನ್ನ ಕಚೇರಿಯಲ್ಲೇ ಸಿಗುತ್ತಿದ್ದರೇನೋ, ನೀನ್ಯಾಕೆ ನನ್ನ ಮಗನ ಹಿಂದೆ ಬಿದ್ದೆ? ಅವನ ಜೀವನವನ್ನು ಏಕೆ ಹಾಳು ಮಾಡ್ತಿದ್ದೀಯ?’

‘ನೋಡಿ ಆಂಟಿ’, ನಾನು ಅವರನ್ನು ಶಾಂತಗೊಳಿಸಲು ಬಯಸಿದೆ, ಅಪಶಬ್ದಗಳಿಂದಾಗಿ ನನ್ನ ಮನಸ್ಸು ಜರಡಿಯಾಗುತ್ತಿತ್ತು.

‘ನಾನು ನಿನ್ನ ಆಂಟಿ ಅಲ್ಲ, ನಾನು ನಿನಗೇನೂ ಆಗಬೇಕಿಲ್ಲ, ಮೂರು ಕಾಸಿನ ಹೆಂಗ್ಸೆ... ರಿತಿಕ್‌ನ ತಂದೆ ನಿನ್ನನ್ನು ತಮ್ಮ ಸೊಸೆಯಾಗಿ ಮಾಡಿಕೊಳ್ಳುವ ಪ್ರಸ್ತಾವ ಹೊತ್ತು ನಿನ್ನ ಬಳಿಗೆ ಏಕೆ ಬಂದರೋ...? ಆಗ ನನ್ನ ಆರೋಗ್ಯ ಸರಿಯಿರಲಿಲ್ಲ, ಇಲ್ಲದಿದ್ರೆ ನಾನೇ ಬರ್ತಿದ್ದೆ, ನಿನಗೆ ಕಸಬರಿಗೆಯಿಂದ ಹೊಡೆದು ನನ್ನ ಮಗನ ಮನೆಯಿಂದ ಹೊರ ಹಾಕ್ತಿದ್ದೆ. ಹಾ...ಗಿತ್ತಿ!’ ರಿತಿಕ್ ತಾಯಿ ನನ್ನನ್ನು ಮನಸಾರೆ ನಿಂದಿಸುತ್ತಿದ್ದರು. ಈ ನಡುವೆ ಅಕೌಂಟೆಂಟ್ ಸಹ ಬಂದು ತಮ್ಮ ಕುರ್ಚಿಯಲ್ಲಿ ಕೂತಿದ್ದರು. ಹೀಗಾಗಿ ನಾನು ಬಯಸಿದ್ದಾಗ್ಯೂ ಮಾರುತ್ತರ ಕೊಡದಾದೆ. ನನ್ನ ಕಣ್ಣುಗಳು ತುಂಬಿ ಬಂದವು.

ನಾನು ರಿಸೀವರ್ ಕೆಳಗಿಟ್ಟೆ. ನಾನು ಮರಳಿ ಹೋಗಬೇಕೆಂದಿದ್ದೆ, ಆಗಲೇ ಫೋನ್ ರಿಂಗಾಯಿತು. ನನ್ನ ಕಾಲುಗಳು ನಿಂತವು. ಅಜ್ಞಾತ ಭಯವೊಂದು ಕಾಡಿತು.

‘ಹಲೋ’ ಅಕೌಂಟೆಂಟ್ ಸಿಕರವಾರರು ಫೋನ್ ಎತ್ತಿದರು, ‘ಯಾರು? ಯಾರು ಬೇಕು? ನೋಡಿ ಮೇಡಂ, ನೀವು ನಿಮ್ಮ ನಾಲಿಗೆಯ ಮೇಲೆ ಹಿಡಿತವಿಟ್ಟುಕೊಳ್ಳಿ. ಇದು ಆಫೀಸ್ ಫೋನ್. ಹೀಗೆ ನೀವು ಆಫೀಸ್ ಫೋನ್‌ನಲ್ಲಿ ನಮ್ಮ ಯಾವ ಸಿಬ್ಬಂದಿಯನ್ನು ನಿಂದಿಸಿದರೂ, ನಾನು ನಿಮ್ಮ ವಿರುದ್ಧ ಪೊಲೀಸರಿಗೆ ರಿಪೋರ್ಟ್ ಮಾಡಬೇಕಾಗುತ್ತೆ. ನೀವೇನೇ ಹೇಳಬೇಕೆಂದಿದ್ದರೂ, ನೀವು ಅವರಿಗೆ ವೈಯಕ್ತಿಕವಾಗಿ ಫೋನ್ ಮಾಡಿ ಹೇಳಿ ತಿಳೀತಾ?’ ಸಿಕರವಾರರು ಗದರಿಸುತ್ತಾ ಹೇಳಿ, ರಿಸೀವರ್ ಕೆಳಗಿಟ್ಟರು. ನಂತರ ಅವರು ನನ್ನೆಡೆಗೆ ನೋಡಿದರು. ಮೊದಲ ಬಾರಿಗೆ ನಾನು ನಾಚಿದೆ; ನನಗೆ ಅಸಹಾಯಕತೆಯ ಪ್ರಜ್ಞೆ ಕಾಡಿತು. ನಾಚಿಕೆ ಏಕಾಯಿತೆಂದರೆ, ಈಗ ನಾನು ಸಿಕರವಾರರೊಂದಿಗೆ ಮನಬಿಚ್ಚಿ ಮಾತನಾಡಲು ಹಿಂಜರಿಯಬೇಕಿತ್ತು. ಅವರು ನನ್ನ ಪರ ವಹಿಸಿದ್ದರು. ಒಂದು ರೀತಿಯಲ್ಲಿ ಅವರು ನನ್ನ ಮೇಲೆ ಕೃಪೆ ತೋರಿದ್ದರು. ಫೋನ್‌ನಲ್ಲಿ ನಿಂದಿಸಿದವರು ರಿತಿಕ್‌ನ ತಾಯಿಯಾಗಿದ್ದರು. ಹೀಗಾಗಿ ನಾನು ಕಾಲ್‌ಬ್ಯಾಕ್ ಮಾಡಿ ಅವರಿಗೆ ಅವರ ಮಟ್ಟದಲ್ಲಿಯೇ ನಿಂದಿಸಲು ಸಾಧ್ಯವಿರಲಿಲ್ಲ, ಇದು ನನ್ನ ಅಸಹಾಯಕತೆಯಾಗಿತ್ತು.

‘ಇನ್ನು ಅವರು ಎಂದೂ ಆಫೀಸ್‌ಗೆ ಫೋನ್ ಮಾಡಲ್ಲ’, ಸಿಕರವಾರರು ಗೆಲುವಿನ ಭಾವನೆಯಿಂದ ನೋಡಿದರು.

‘ಸುಗಂಧಾ, ಇದು ನಿಮ್ಮ ಜೀವನ, ನಿಮ್ಮ ತೀರ್ಮಾನ. ಆದರೆ ನೀವು ಎಲ್ಲಾ ವಿಷಯದ ಬಗ್ಗೆ ಒಮ್ಮೆ ಶಾಂತ ಮನಸ್ಸಿನಿಂದ ಯೋಚಿಸಿ. ನೀವು ನೀನಾ ಗುಪ್ತಾ, ಸುಶ್ಮಿತಾ ಸೇನ್ ಅಥವಾ ಕರೀನಾ ಕಪೂರ್ ಅಲ್ಲ, ನೀವೊಂದು ಕಸಬಾದ ಮಧ್ಯಮ ವರ್ಗದ ಯುವತಿಯಾಗಿದ್ದೀರ, ಇದೆಲ್ಲಾ ಹಣವಂತರು ಮತ್ತು ಮಹಾನಗರಗಳಲ್ಲಿ ಬದುಕುವ ವಿಧಾನಗಳಾಗಿವೆ, ನಿಮ್ಮಂಥ ಯುವತಿಯರು ದುಃಖವನ್ನು ಅನುಭವಿಸಬೇಕಾಗುತ್ತದೆ; ನಿಮ್ಮಂಥವರು ನೆಮ್ಮದಿ, ಅಧಿಕಾರ ಮತ್ತು ಗೌರವವನ್ನು ಪಡೆಯಲು ಸಾಧ್ಯವಾಗದು. ಇನ್ನು ನಾನೇನೂ ಹೇಳುವುದಿಲ್ಲ, ನೀವು ಸ್ವತಃ ತಿಳಿವಳಿಕಸ್ಥರಾಗಿದ್ದೀರ’.

ಸಿಕರವಾರರ ಅಭಿಪ್ರಾಯಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರು ಹೀಗೂ ಯೋಚಿಸುತ್ತಾರೆಂದು ನನಗೆ ತಿಳಿದಿರಲಿಲ್ಲ. ನಾನು ಅವರನ್ನು ಕಚೇರಿಯ ಪ್ರಾಣಿ, ಅವರಿಗೆ ಫೈಲ್‌ಗಳು ಮತ್ತು ಕಚೇರಿಯ ನಿಯಮಗಳನ್ನು ಹೊರತುಪಡಿಸಿ ದೇಶಸಮಾಜದ ಬಗ್ಗೆ ಕಾಳಜಿಯಿಲ್ಲ ಎಂದು ತಿಳಿಯುತ್ತಿದ್ದೆ.

‘ನಾನು ಯೋಚ್ನೆ ಮಾಡ್ತೀನಿ! ನಿಮಗೆ ಥ್ಯಾಂಕ್ಸ್...’

‘ಯಾವುದಕ್ಕೆ ಥ್ಯಾಂಕ್ಸ್?’

‘ನನ್ನ ಪರವಾಗಿ ಮಾತನಾಡಿದ್ದಕ್ಕೆ.’

‘ನಿಮ್ಮ ಪರ ವಹಿಸಿ ಮಾತನಾಡದಿರಲು ಹೇಗೆ ಸಾಧ್ಯ? ಈ ಕಚೇರಿಯಲ್ಲಿ ನನ್ನನ್ನು ಹೊರತುಪಡಿಸಿ ಬೇರೆಯವರು ನಿಮಗೆ ನಿಂದಿಸುವುದನ್ನು ನಾನು ಹೇಗೆ ಸಹಿಸಲು ಸಾಧ್ಯ?’ ಸಿಕರವಾರರು ನಗುತ್ತಾ ಹೇಳಿದರು. (ಸಶೇಷ)